# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 1946/2025

ಸಿ.ಡಬ್ಲ್ಯು 12

ಪಿ.ಡಬ್ಲ್ಯು 7

ಸಾಕ್ಷಿದಾರರ ಹೆಸರು – ದೇವೇಂದ್ರಪ್ಪ

ತಂದೆಯ ಹೆಸರು – ಮಾರಪ್ಪ

ವಯಸ್ಸು – 29 ವರ್ಷ

ಉದ್ಯೋಗ – ಪೋಲಿಸ್ ಕಾನಸ್ಟೇಬಲ್ ಕಾರವಾರ ನಗರ ಪೊಲೀಸ್ ಠಾಣೆ

ವಾಸ್ತವ್ಯ – ಕಾರವಾರ

(ಇಂದು ದಿನಾಂಕಃ 22-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಕಳೆದ 4 ವರ್ಷಗಳಿಂದ ನಾನು ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಕಾನಸ್ಟೇಬಲ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 22-02-2025 ರಂದು ಚಾಸಾ 14 ರವರ ಮೌಖಿಕ ಆದೇಶದ ಮೇರೆಗೆ ಘಟನಾ ಸ್ಥಳದ ಮಹಜರ ಕಾಲಕ್ಕೆ ಹಾಜರಿದ್ದು ಭಾವ ಚಿತ್ರ ತೆಗೆದಿದ್ದೇನೆ. ಈ ಬಗ್ಗೆ ಕಲಂ 63 ರಡಿಯಲ್ಲಿ ಪ್ರಮಾಣ ಪತ್ರ ನೀಡಿದ್ದೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ನಿಪಿ- 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎಎ ವಕೀಲರಿಂದಃ**

ನಿಪಿ-8 ರಲ್ಲಿ ಕ್ಯಾಮರಾ, ಕಂಪ್ಯೂಟ್ಯರ ಮತ್ತು ಮೊಬೈಲ್ ಮತ್ತು ಪ್ರಿಂಟರನ ನಂಬರನ್ನು ನಮೂದಿಸಿಲ್ಲ ಎಂದರೆ ಸರಿ . ಓಪೋ ಮೊಬೈಲ್ ಯಾರಿಗೆ ಸೇರಿದ್ದು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಅದು ತನಿಖಾಧಿಕಾರಿಗೆ ಸೇರಿದ್ದು ಎಂದು ಹೇಳುತ್ತಾರೆ . ಆ ಬಗ್ಗೆ ನಿಪಿ-8 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಯಾವ ಪದ್ಧತಿಯ ಆಧಾರದ ಮೇಲೆ ಭಾವ ಚಿತ್ರಗಳನ್ನು ತಯಾರಿಸಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ . ಎಲ್ಲಾ ಉಪಕರಣಗಳು ಸುಸ್ಥಿತಿಯಲ್ಲಿದ್ದವು ಎಂದು ನಮೂದಿಸಿಲ್ಲ ಎಂದರೆ ಸರಿ . ನಮ್ಮ ಠಾಣೆಯಲ್ಲಿ ಬರಹಗಾರ ಪ್ರತ್ಯೇಕವಾದ ಕೋಣೆ ಇದೆ ಎಂದರೆ ಸರಿ . ಅಲ್ಲಿ ಎರಡು ಕಂಪ್ಯೂಟರ್ ಮತ್ತು ಒಂದು ಪ್ರಿಂಟರ್ ಇದೆ ಎಂದರೆ ಸರಿ . ಅದನ್ನು ಬಿಟ್ಟು ಯಾವುದೇ ಲ್ಯಾಪಟಾಪ್ ಇಲ್ಲ ಎಂದರೆ ಸರಿ . ಸದರಿ ಕಂಪ್ಯೂಟರ್ ಮತ್ತು ಪ್ರಿಂಟರನ ನಿರ್ವಹಣೆಯನ್ನು ನಮ್ಮ ಠಾಣೆಯ ಬರಹಗಾರರು ಮಾಡುತ್ತಾರೆ ಎಂದರೆ ಸರಿ . ಎಲ್ಲಾ ಬರವಣಿಗೆ ಮತ್ತು ಬೆರಳಚ್ಚು ಅಲ್ಲೇ ಮಾಡುತ್ತಾರೆ ಎಂದರೆ ಸರಿಯಲ್ಲ. ನಿಪಿ–8 ರಲ್ಲಿ ನಿರ್ವಹಣೆ ಮಾಡುವ ವ್ಯಕ್ತಿಯ ಹೆಸರು ನಮೂದಿಲ್ಲ ಎಂದರೆ ಸರಿ . ನಿಪಿ–8 ದೋಷಪೂರಿತವಾದ ದಾಖಲೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಕಾಲಕ್ಕೆ ಹಾಜರಿರಲಿಲ್ಲ ಮತ್ತು ಭಾವ ಚಿತ್ರ ತೆಗೆದಿಲ್ಲ ಅನ್ನುವುದು ಸರಿಯಲ್ಲ. ನಿಪಿ–8 ಮತ್ತು ನಿಪಿ–9 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ